ಒ.ಎಸ್. ನಂಬ್ರ:177-09

ಪಿ.ಡಬ್ಲ್ಯೂ: 1

ದಿನಾಂಕ: *07-08-2017* ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.
ಮುಂದುವರೆದ ಪಾಟೀ ಸವಾಲು: ಶ್ರೀ ಎಸ್.ಎಂ.ಎಸ್. ವಕೀಲರಿಂದ

6. ದಾವ ಡಿ ಶೆಡ್ಯೂಲ್ ಆಸ್ತಿಯ ಮೂಲಿದಾರರು ಶಶಿಕಲಾ ಶೆಟ್ಟಿ ಇದ್ದು ಸದ್ರಿ ಆಸ್ತಿಯ ಮೂಲ ಗೇಣಿದಾರರು ಈ ಕೇಸಿನ ವಾದಿಗಳಾದ ವಿಠಲ್ ಶೆಟ್ಟಿ , ಹೇಮಲತಾ ಶೆಟ್ಟಿ , ರುಕ್ಮಿಣಿ ಹೆಗ್ಡೆ ಮತ್ತು ಪ್ರೇಮಲತಾ ಶೆಟ್ಟಿ. ಸದ್ರಿ ಮೂಲ ಗೇಣಿದಾರರು ಆದಿಭೋಗದ ಹಕ್ಕಿಗಾಗಿ ಭೂ ನ್ಯಾಯಾ ಮಂಡಳಿಯಲ್ಲಿ ಯಾವುದೇ ಅರ್ಜಿಯನ್ನು ಸಲ್ಲಿಸಿಲ್ಲ. ದಾವ ಆಸ್ತಿಗಳು ವಾದಿಯರ ಮೂಲಿಹಕ್ಕಿನ ಆಸ್ತಿ ಎಂದು ಹೇಳಿದ್ದೇವೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಆದರೇ ವಾದಿಗಳು ದಾವ ಆಸ್ತಿಯ ಮೂಲಗೇಣಿಯ ಹಕ್ಕನ್ನು ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ:8 ರಲ್ಲಿ ಮೂಲಿಹಕ್ಕಿನ ಆಸ್ತಿಗಳು ಎಂದು ಬರೆಯಲಾಗಿದೆ ಎಂದರೆ ಇರಬಹುದು ಆದರೆ ಅದರ ಬಗ್ಗೆ ನನಗೆ ಗೊತ್ತಾಗುವುದಿಲ್ಲಾ ಎಂದು ನುಡಿಯುತ್ತಾರೆ. ನಿಪಿ:8ರಲ್ಲಿ ವಾದಿಗಳಿಗೆ ಯಾವುದೇ ಹಕ್ಕಿನ ಬಗ್ಗೆ ಬರೆದಿಲ್ಲಾ ಎಂದು ನುಡಿಯುತ್ತಾರೆ. ನಿಪಿ:8 2008 ಮತ್ತು 2009 ನೇ ಸಾಲಿನ ಆರ್.ಟಿ.ಸಿ ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ಸರ್ವೆ ನಂಬ್ರ:187-11ಸಿ ಇದರ ಆರ್.ಟಿ.ಸಿ. ಯ ದೃಢೀಕೃತ ನಕಲನ್ನು ತೊರಿಸಲಾಗಿ ಅದು ನಿಪಿ:8 ರಲ್ಲಿ ತೋರಿಸಿರುವ ಆಸ್ತಿಯ ಆರ್.ಟಿ.ಸಿ ಎಂದರೆ ಸಾಕ್ಷಿಯೂ ಅದನ್ನು ಒಪ್ಪಿದ್ದು ಅದನ್ನು ನಿಡಿ:2 ಎಂದು ಗುರುತಿಸಿದೆ. ನಿಡಿ:2 1970-81 ನೇ ಸಾಲಿನ ಆರ್.ಟಿ.ಸಿ. ಎಂದರೆ ಸರಿ. ನಿಡಿ:2 ರಲ್ಲಿ ಸದ್ರಿ ಆಸ್ತಿಯ ಮಾಲಿಕರು ಚನ್ನಮ್ಮ ಶೆಟ್ಟಿಯ ಮಗಳು ಪ್ರಫುಲ್ಲ ಶೆಟ್ಟಿ ಎಂದು ತೋರಿಸಲಾಗಿದೆ ಎಂದರೆ ಸರಿ. ನಿಡಿ:2 ರ ಆಸ್ತಿಯಲ್ಲಿ ವಾದಿಯರಿಗೆ ಮೂಲಿ ಹಕ್ಕು ಆಗಲಿ ಅಥವಾ ಮೂಲಗೇಣಿ ಹಕ್ಕಾಗಲಿ ಪ್ರಾಪ್ತವಾಗಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಪ್ರಫುಲ್ಲಾ ಶೆಟ್ಟಿಯವರು ಶಕುಂತಲಾ ಶೆಟ್ಟಿಯವರಿಗೆ ಸಂಬಂಧಿಕರಿದ್ದು ಅವರು ವಾದಿಯವರಿಗೆ ಸಂಬಂಧಿಕರಲ್ಲ. ದಾವ ಡಿ ಶೆಡ್ಯೂಲ್ ಆಸ್ತಿಯೂ ಎಂದಿಗೂ ವಾದಿಯರ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 1ನೇ ವಾದಿಯ ಗಂಡನಾದ ಸದಾನಂದ ಶೆಟ್ಟಿಯವರು ಕುಂದಾಪುರದ ತಹಶೀಲ್ದಾರ್ ರವರ ಮೇಲೆ ಪ್ರಭಾವ ಬೀರಿ ದಿ:21-5-2007 ರ ಆದೇಶದಂತೆ ಅಕ್ರಮವಾಗಿ ಆದೇಶವನ್ನು ಪಡೆದು ನಿಪಿ:8 ರಂತೆ ವಾದಿಗಳ ಹೆಸರನ್ನು ಅಕ್ರಮವಾಗಿ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

7. ದಾವ ಆಸ್ತಿಗಳನ್ನು ಪ್ರತ್ಯೇಕವಾಗಿ ಗುರುತಿಸಲು ನಕಾಶೆಯನ್ನು ಹಾಜರುಪಡಿಸಿಲ್ಲ. ಸಾಕ್ಷಿಯೂ ಮುಂದುವರೆದು ಸದ್ರಿ ನಕಾಶೆ ನನ್ನ ಬಳಿ ಇದ್ದು ಅದನು ವಕೀಲರಿಗೆ ಕೊಟ್ಟಿದ್ದು ಅವರು ಏನು ಮಾಡಿದ್ದಾರೆ

ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆಯ ವಾದಪತ್ರದಲ್ಲಿ ತೋರಿಸಿರುವಂತೆ ನಾಲ್ಕು ಆಸ್ತಿಗಳಿಗೂ ಯಾವುದೇ ಗಡಿ ಗುರುತು ಇಲ್ಲದಿದ್ದರೂ ಗೊಂದಲ ಸೃಷ್ಟಿಮಾಡುವ ಉದ್ದೇಶದಿಂದ ನಾವೇ ಊಹೆಯ ಮೇರೆಗೆ ವಾದಪತ್ರದಲ್ಲಿ ಆಸ್ತಿಗಳ ಗಡಿಗುರುತನ್ನು ತೋರಿಸಿದ್ದೇವೆ ಅಂತಹ ಗಡಿ ಗುರುತು ಇಲ್ಲ ಎಂದರೆ ಸರಿಯಲ್ಲ.

8. ದಾವ ಆಸ್ತಿಯಲ್ಲಿರುವ ಮನೆಗಳಲ್ಲಿ ಎಷ್ಟು ಜನ ವಾಸವಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲಾ. ಸಾಕ್ಷಿಯೂ ಮುಂದುವರೆದೂ ದಾವ ಆಸ್ತಿಗಳಲ್ಲಿ ಎ ಮತ್ತು ಬಿ ಶೆಡ್ಯೂಲ್ ಆಸ್ತಿಗಳಲ್ಲಿ ಮಾತ್ರ ಮನೆಗಳು ಇವೆ ಎಂದು ನುಡಿಯುತ್ತಾರೆ. ದಾವ ಆಸ್ತಿಯಲ್ಲಿ ಇರುವ ಮನೆಗಳಲ್ಲಿ ವಾಸಮಾಡುವವರಲ್ಲಿ ದಾವ ಎ ಶೆಡ್ಯೂಲ್ ಮನೆಯಲ್ಲಿ ಇರುವ ಅಂತೋನಿ ಡಿ ಮೇಲ್ಲೊ ಮತ್ತು ಬಿ ಶೆಡ್ಯೂಲ್ ಆಸ್ತಿಯ ಮನೆಯಲ್ಲಿರುವ ಶರು ಡಿ ಮೇಲ್ಲೊ ರವರ ಪರಿಚಯ ನನಗೆ ಇದೆ. ಅಂತೊನೀ ಡಿ ಮೇಲ್ಲೋ ರವರು ದಾವ ಎ ಶೆಡ್ಯೂಲ್ ಮನೆಯಲ್ಲಿ ಮತ್ತು ಶರು ಡಿ ಮೋಲ್ಲೊ ರವರು ಬಿ ಶೆಡ್ಯೂಲ್ ಆಸ್ತಿಯ ಮನೆಯಲ್ಲಿ ವಾಸವಾಗಿದ್ದಾರೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇಲ್ಲ ಎಂದು ನುಡಿಯುತ್ತಾರೆ. ನನಗೆ ದಾವ ಆಸ್ತಿಗಳ ಪರಿಚಯ ಇಲ್ಲದ ಕಾರಣ ದಾವ ಆಸ್ತಿಗಳಲ್ಲಿ ಎಷ್ಟು ಮನೆಗಳಿವೆ ಮತ್ತು ಆ ಮನೆಗಳಲ್ಲಿ ಎಷ್ಟು ಜನ ವಾಸ್ತವ್ಯ ಇದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ದಾವ ಆಸ್ತಿಗಳಲ್ಲಿರುವ ಮನೆಯಲ್ಲಿ ಒಟ್ಟು 18 ಜನ ವಾಸವಿದ್ದಾರೆ ಎಂದರೆ ಸರಿಯಲ್ಲ. ನಾಲ್ಕು ದಾವ ಆಸ್ತಿಗಳು ಸಹ ಮೇಲೆ ಹೇಳಿದ 18 ಜನರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವ ಆಸ್ತಿಯಲ್ಲಿ ವಾಸ ಮಾಡುವವರ ವಿರುದ್ಧ ಅವರನ್ನು ಹೊರಹಾಕುವ ಉದ್ದೇಶದಿಂದ ಆಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿ ಈ ದಾವೆಯನ್ನು ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

ಓ.ಹೇ.ಕೇ.ಸರಿ ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಕುಂದಾಪುರ